ಹಸಿರು ಫೋಟೋ ಒಟ್ಟು

471 5279 5788

ಹಂಚಿಕೆ ಕ್ರಮವು ಜಾರಿಯಲ್ಲಿದ್ದು 30.11.98ಕ್ಕೆ ಮುಗಿಸಲು ಪ್ರಯತ್ನಿಸಲಾಗಿದೆ.

ಆ) ಹುಬ್ಬಳ್ಳಿ-ಧಾರವಾಡ ಮಹಾನಗರದಲ್ಲಿರುವ ಹಸಿರು ಕಾರ್ಡುಗಳ ಸಂಖ್ಯೆ 17,785 ಹೊಸದಾಗಿ ಹಸಿರು ಕಾಡಿರಗೆ ಬಂದ ಅರ್ಜಿಗಳ ಸಂಖ್ಯೆ: 1507.

ಇಲ್ಲಿಯವರೆಗೆ ಒಟ್ಟು 471 ಹಸಿರು ಕಾರ್ಡುಗಳನ್ನು ಹಂಚಲಾಗಿದೆ. ಉಳಿದ ಅರ್ಜಿಗಳನ್ನು ಈ ತಿಂಗಳ ಒಳಗಾಗಿ ಪರಿಶೀಲಿಸಿ, ಅರ್ಹ ಕುಟುಂಬಗಳಿಗೆ ಪಡಿತರ ಚೀಟಿ ನೀಡಲು ಕ್ರಮ ಕೈಗೊಳ್ಳಲಾಗಿದೆ.

ದೆಹಲಿಯ ಕರ್ನಾಟಕ ಭವನದ ಅವ್ಯವಸ್ಥೆ ಬಗ್ಗೆ

2960:(4040)

ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ): ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನವದೆಹಲಿಯಲ್ಲಿರುವ ಕರ್ನಾಟಕ ಭವನಗಳು ಅವ್ಯವಸ್ಥೆಯ ಆಗರಗಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಈ ಅವ್ಯವಸ್ಥೆಯನ್ನು ಸರಿ ಪಡಿಸಲು ಸರ್ಕಾರ ಕೈಗೊಂಡ ಕ್ರಮಗಳೇನು?

ಇ) ಕೌಟಿಲ್ಯ ರಸ್ತೆಯಲ್ಲಿರುವ ಹಳೆಯ ಕರ್ನಾಟಕ ಭವನ ಕೇವಲ ಅಧಿಕಾರಿಗಳಿಗೆ ಮಾತ್ರವೇ ಮೀಸಲಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಹಾಗಿದ್ದಲ್ಲಿ, ಶಾಸಕರಿಗೆ, ಸಂತತ್ ಸದಸ್ಯರಿಗೆ ಅಲ್ಲಿ ಸ್ಥಳಾವಕಾಶ ಒದಗಿಸಲು ಸರ್ಕಾರದವರು ಕ್ರಮ ಕೈಗೊಳ್ಳುವರೇ?

ಶ್ರೀ ಜೆ.ಹೆಚ್.ಪಟೇಲ್ (ಮುಖ್ಯಮಂತ್ರಿಗಳು):

ಅ) ಈ ರೀತಿಯ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಕೌಟಿಲ್ಯ ಮಾರ್ಗದಲ್ಲಿರುವ ಕರ್ನಾಟಕ ಭವನದಲ್ಲಿ ಅಧಿಕಾರಿಗಳಿಗೆಂದೇ ಯಾವ ಕೊಠಡಿಗಳನ್ನು ಕಾಯ್ದಿರಿಸಿರುವುದಿಲ್ಲ. ಆಧ್ಯತೆಯ ಮೇರೆಗೆ ಘನತೆವೆತ್ತ ರಾಜ್ಯಪಾಲರು, ಮಾನ್ಯ ಮುಖ್ಯಮಂತ್ರಿಗಳು, ಉಪ ಮುಖ್ಯ ಮಂತ್ರಿಗಳು, ಕರ್ನಾಟಕ ವಿಧಾನ ಪರಿಷತ್ತಿನ ಸಭಾಪತಿಗಳು, ಕರ್ನಾಟಕ ವಿಧಾನ ಸಭೆಯ ಸಭಾಧ್ಯಕ್ಷರು, ಕರ್ನಾಟಕ ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರು, ಸಚಿವರು, ಇತರೆ ಗಣ್ಯ ವ್ಯಕ್ತಿಗಳು ಮತ್ತು ಹಿರಿಯ ಅಧಿಕಾರಿಗಳಿಗೂ ಕೊಠಡಿಗಳನ್ನು ಹಂಚಿಕೆ ಮಾಡಲಾಗುತ್ತಿದೆ.

ಈ) ಲಭ್ಯತೆಯ ಆಧಾರದ ಮೇಲೆ, ಸಂಸತ್ ಸದ್ಯರಿಗೂ ಹಾಗೂ ಶಾಸಕರುಗಳಿಗೂ ಕರ್ನಾಟಕ ಭವನ- 1ರಲ್ಲಿ ಕೊಠಡಿಗಳನ್ನು ನೀಡಲಾಗುವುದು.

1997-98ರಲ್ಲಿ ವಕ್ಫ್‌ಗೆ ಬಿಡುಗಡೆಯಾದ ಹಣ

2961:(3998)

ಡಾ: ಎಂ.ಪಿ.ಕರ್ಕಿ (ಕುಮಟಾ): ಮಾನ್ಯ ಗೃಹ ಮತ್ತು ವಕ್ಫ್ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 97-98ರ ಆಯವ್ಯಯದಲ್ಲಿ ವಕ್ಫ್‌ಗೆ ಗೊತ್ತುಪಡಿಸಿದ ಹಣವೆಷ್ಟು?

ಆ) ಅದರಲ್ಲಿ 97-98ರಲ್ಲಿ ಹಣವೆಷ್ಟು? (ವಿವರ ನೀಡುವುದು)

ಶ್ರೀ ಆರ್.ರೋಷನ್ ಬೇಗ್ (ಗೃಹ ಮತ್ತು ವಕ್ಫ್ ರಾಜ್ಯ ಸಚಿವರು):

ಅ) 1997-98ನೇ ಸಾಲಿನಲ್ಲಿ ವಕ್ಫ್ ಸಂಸ್ಥೆ ರಿಪೇರಿ, ಜೀರ್ಣೋದ್ಧಾರ ಮತ್ತು ಅಭಿವೃದ್ಧಿಗಾಗಿ 2.00 ಕೋಟಿ ರೂ.ಗಳ ನಿಗಧಿಪಡಿಸಲಾಗಿದೆ. ಮತ್ತು 62.75 ಲಕ್ಷ ರೂ.ಗಳನ್ನು ಮಂಡಳಿಯ ನಿರ್ವಹಣಾ ವೆಚ್ಚಕ್ಕಾಗಿ ಅನುದಾನವನ್ನು ಬಿಡುಗಡೆ ಮಾಡಲಾಗಿದೆ.

ಆ) 2.00 ಕೋಟಿ ರೂ.ಗಳಲ್ಲಿ 1.90 ಕೋಟಿ ರೂ.ಗಳನ್ನು ರೀಪೇರಿಗಾಗಿ ಮತ್ತು ಅಭಿವೃದ್ಧಿ ಅನುದಾನವಾಗಿ ಬಿಡುಗಡೆ ಮಾಡಲಾಗಿದೆ ಮತ್ತು 62.75 ಲಕ್ಷ ರೂ.ಗಳನ್ನು ವಕ್ಫ್ ಮಂಡಳಿಯ ನಿರ್ವಹಣಾ ವೆಚ್ಚಕ್ಕಾಗಿ ಸಹ ಬಿಡುಗಡೆ ಮಾಡಲಾಗಿದೆ.